19

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

**ಸೂಚನೆ**

ಕೋಲಾರದಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾಗಿರುವ ಅಮೃತ್ ಯೋಜನೆ 1.0 ರಲ್ಲಿ ಯುಜಿಡಿ ಕಾಮಗಾರಿ ನಡೆಸಿದ್ದು, ಮ್ಯಾನ್ ಹೋಲ್‌ಗಳ ನಿರ್ಮಾಣವಾಗಿ ತಿಂಗಳು ಕಳೆಯುವ ಹೊತ್ತಿಗೆ ಹಾನಿಯಾಗಿವೆ. ಅವೈಜ್ಞಾನಿಕ ಕಾಮಗಾರಿ ನಡೆದಿದ್ದು, ಜನತೆ ಹೈರಾಣಾಗಿದ್ದಾರೆ, ನಗರ ವಾಸಿಗಳಿಗೆ ಚರಂಡಿ, ಒಳಚರಂಡಿ, ಕುಡಿಯುವ ನೀರು, ವಿದ್ಯುತ್ ದೀಪ ಹೀಗೆ ಹಲವು ಸೌಲಭ್ಯಗಳನ್ನು ಕಲ್ಪಿಸಲು ಕೇಂದ್ರ, ರಾಜ್ಯ ಸರ್ಕಾರಗಳು ವಿವಿಧ ಯೋಜನೆಗಳಡಿ ಕೋಟ್ಯಂತರ ರೂ. ಅನುದಾನ ಮಂಜೂರು ಮಾಡುತ್ತದೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕೋಲಾರ ನಗರಸಭೆ ವ್ಯಾಪ್ತಿಯಲ್ಲಿ ಹೊಸದಾಗಿ ಒಳಚರಂಡಿ ಕೊಳವೆ ಮಾರ್ಗವನ್ನು ಅಳವಡಿಸಲು 72,89,25,446 ರೂ.ಗೆ ಟೆಂಡರ್ ಕರೆಯಲಾಗಿತ್ತು. ಆ ಟೆಂಡರ್ ಅನ್ನು ಗುಜರಾತಿನ ಜಯಂತಿ ಸೂಪರ್ ಕನ್‌ಸ್ಟ್ರಷನ್ ಸಂಸ್ಥೆ ಪಡೆದುಕೊಂಡು ಕಾಮಗಾರಿ ಮುಗಿಸಿದೆ. ಆ ನಂತರ 5 ವರ್ಷಗಳ ಕಾಲ ನಿರ್ವಹಣೆ ಮಾಡಬೇಕಾಗಿರುವ ಗುತ್ತಿಗೆ ಸಂಸ್ಥೆ ನಿರ್ಲಕ್ಷ್ಯ ತೋರಿರುವ ಬಗ್ಗೆ.

**ಉತ್ತರ**

ದಿನಾಂಕ:10.03.2016 ರಂದು ನಡೆದ 3ನೇ ಎಸ್.ಹೆಚ್.ಪಿ.ಎಸ್.ಸಿ ಸಭೆಯಲ್ಲಿ ಕೋಲಾರ ನಗರಕ್ಕೆ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ಯೋಜನೆಯ ರೂ.73.73 ಕೋಟಿಗಳ ಅಂದಾಜು ಪಟ್ಟಿಗೆ (Capex) ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಸದರಿ ಅಂದಾಜು ಮೊತ್ತದಲ್ಲಿ ನಿರ್ವಹಣೆ ವೆಚ್ಚವು ಒಳಗೊಂಡಿರುವುದಿಲ್ಲ.

3ನೇ ಎಸ್.ಹೆಚ್.ಪಿ.ಎಸ್.ಸಿ ಸಭೆಯ ನಡವಳಿಯಂತೆ ಯೋಜನೆಯ ನಿರ್ವಹಣೆ ವೆಚ್ಚವನ್ನು ಸಂಪೂರ್ಣವಾಗಿ ಸ್ಥಳೀಯ ಸಂಸ್ಥೆಯು ಭರಿಸಬೇಕಾಗಿರುತ್ತದೆ. ಈ ಕುರಿತು ಕೋಲಾರ ನಗರಸಭೆಯು ಠರಾವಿನ ಮೂಲಕ ಸಮ್ಮತಿ ನೀಡಿರುತ್ತದೆ. ಸದರಿ ಯೋಜನೆಯಡಿ ಕೈಗೊಂಡ ಕಾಮಗಾರಿಗಳನ್ನು 5 ವರ್ಷಗಳ ಅವಧಿಗೆ (1 ವರ್ಷದ DLP ಅವಧಿ ಒಳಗೊಂಡಂತೆ) ನಿರ್ವಹಣೆ ಮಾಡುವ ಅಂದಾಜು ಮೊತ್ತವು ರೂ.5.65 ಕೋಟಿಗಳಾಗಿರುತ್ತದೆ. ಯೋಜನೆಯನ್ನು ದಿನಾಂಕ:24.05.2022 ರಲ್ಲಿ 8 ದಶ ಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ ಕಾಮಗಾರಿಯನ್ನು ಹೊರತುಪಡಿಸಿ ಪೂರ್ಣಗೊಳಿಸಲಾಗಿರುತ್ತದೆ.

**ಸದರಿ ಯೋಜನೆಯ ಆರ್ಥಿಕ ಮಾದರಿಯು ಈ ಕೆಳಕಂಡಂತೆ ಇರುತ್ತದೆ.**

| ಕ್ರ.ಸಂ | ವಿವರ | ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1 | ಕೇಂದ್ರ ಸರ್ಕಾರದ ಅನುದಾನ (ಶೇ. 50) | 3650.00 |
| 2 | ಕರ್ನಾಟಕ ಸರ್ಕಾರದ ಅನುದಾನ (ಶೇ. 20) | 1533.00 |
| 3 | ಸ್ಥಳೀಯ ಸಂಸ್ಥೆಯ ವಂತಿಕೆ (ಶೇ. 30) | 2190.00 |
| | **ಒಟ್ಟು** | **7373.00** |

2.....,

ಸದರಿ ಯೋಜನೆಯ ಕಾಮಗಾರಿಗಳನ್ನು ಟೆಂಡರ್ ಆಧಾರದ ಮೇಲೆ ಮೆ// ಜಯಂತಿ ಸೂಪರ್ ಕನ್ಸ್ ಟ್ರಕ್ಷನ್, ಮೆಹಸಾನ, ಗುಜರಾತ್ ರವರಿಗೆ ದಿನಾಂಕ: 18.11.2016 ರಂದು ವಹಿಸಲಾಗಿದೆ. ಗುತ್ತಿಗೆಯ ಮೊತ್ತವು ರೂ.72,89,25,446.00 ಆಗಿದ್ದು, ಇದರಲ್ಲಿ ಕಾಮಗಾರಿಗಳ (CAPEX) ಮೊತ್ತ ರೂ. 68,41,25,446.00 ಹಾಗೂ 5 ವರ್ಷಗಳ ನಿರ್ವಹಣೆಯ (OPEX) ಮೊತ್ತ ರೂ.4,48,00,000.00 ಆಗಿರುತ್ತದೆ. ಗುತ್ತಿಗೆಯಡಿ ಗುತ್ತಿಗೆದಾರರು ತಾವು ನಿರ್ಮಿಸಿದ ಕಾಮಗಾರಿಯನ್ನು 5 ವರ್ಷಗಳ ಅವಧಿಗೆ (1 ವರ್ಷದ DLP ಅವಧಿ ಒಳಗೊಂಡಂತೆ) ನಿರ್ವಹಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

**ಸದರಿ ಗುತ್ತಿಗೆಯಡಿ ಕೈಗೊಂಡ ಕಾಮಗಾರಿಗಳ ವಿವರಗಳು ಕೆಳಕಂಡಂತಿದೆ.**

| ಕ್ರ. ಸಂ | ಅನುಮೋದಿತ ಅಂದಾಜು ಪಟ್ಟಿಯಲ್ಲಿ ಅನುವು ಮಾಡಿರುವ ಕಾಮಗಾರಿಗಳು | ಕಾರ್ಯಗತಗೊಳಿಸಿರುವ ಕಾಮಗಾರಿಗಳ ವಿವರಗಳು | ಷರಾ |
|---|---|---|---|
| **A.** | **ಸಿವಿಲ್ ಕಾಮಗಾರಿಗಳು** | | |
| 1 | ಆಂತರಿಕ ಮತ್ತು ಮುಖ್ಯ ಕೊಳವೆ ಮಾರ್ಗಗಳನ್ನು ಅಳವಡಿಸುವುದು. (150 ಮಿ.ಮಿ-600 ಮಿ.ಮಿ.) – 126242 ಮೀಟರ್.<br><br>ಯಂತ್ರಗುಂಡಿಗಳು–4001 | ಆಂತರಿಕ ಮತ್ತು ಮುಖ್ಯ ಕೊಳವೆ ಮಾರ್ಗಗಳನ್ನು ಅಳವಡಿಸುವುದು. (150 ಮಿ.ಮಿ-600 ಮಿ.ಮಿ.) – 122449.70 ಮೀಟರ್.<br><br>ಯಂತ್ರಗುಂಡಿಗಳು – 4768 | ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. |
| 2 | ಒಳಚರಂಡಿ ಗೃಹ ಸಂಪರ್ಕಗಳನ್ನು ಅಳವಡಿಸುವುದು – 10000 | ಒಳಚರಂಡಿ ಗೃಹ ಸಂಪರ್ಕಗಳನ್ನು ಅಳವಡಿಸುವುದು – 10812 | ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ |
| **B.** | **ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ ಕಾಮಗಾರಿಗಳು** | | |
| 1 | ಚಿನ್ನಾಪುರ ಗ್ರಾಮದ ಬಳಿ ಹಾಲಿ ಇರುವ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ಬಳಿ 10 ಮೀಟರ್ ವ್ಯಾಸದ ವೆಟ್‌ವೆಲ್ ಹಾಗೂ ಪಂಪುಮನೆ ನಿರ್ಮಾಣ ಕಾಮಗಾರಿ. | ಚಿನ್ನಾಪುರ ಕೆರೆ ಅಂಗಳದಲ್ಲಿ 8.00 ಎಂ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕ, ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಚಿನ್ನಾಪುರ ಕೆರೆ ಅಂಗಳದಿಂದ ಕೋಲಾರಮ್ಮ ಕೆರೆಗೆ ಪಂಪ್ ಮಾಡಲು 10 ಮೀಟರ್ ವ್ಯಾಸದ 01 ವೆಟ್ ವೆಲ್, 600 ಮಿ.ಮೀ ವ್ಯಾಸದ ಡಿ.ಐ ಏರು ಕೊಳವೆ ಮಾರ್ಗ ಹಾಗೂ ಪೂರಕ ಕಾಮಗಾರಿಗಳನ್ನು ಕೈಗೊಳ್ಳಲು ಸ್ಥಳೀಯ ಸಂಸ್ಥೆಯ ವತಿಯಿಂದ ನಿವೇಶನವನ್ನು ಹಸ್ತಾಂತರಿಸದ ಕಾರಣ ಮತ್ತು ಸ್ಥಳೀಯ ಚಿನ್ನಾಪುರ ಗ್ರಾಮದ ನಿವಾಸಿಗಳು ಕಾಮಗಾರಿ ಕೈಗೊಳ್ಳಲು ಆಕ್ಷೇಪಣೆಯೊಡ್ಡುತ್ತಿರುವುದರಿಂದ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿರುವುದಿಲ್ಲ.<br><br>ಮುಂದುವರೆದಂತೆ ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ, ಕೋಲಾರ ರವರ ಪತ್ರ ಸಂಖ್ಯೆ:12, ದಿನಾಂಕ:01.06.2019 ರಲ್ಲಿ | |
| 2 | 600 ಮಿ.ಮಿ ವ್ಯಾಸದ ಡಿ.ಐ ಏರುಕೊಳವೆ ಮಾರ್ಗ ಒದಗಿಸಿ ಅಳವಡಿಸುವ ಕಾಮಗಾರಿ. | | |
| 3 | DG ಮನೆ ನಿರ್ಮಾಣ ಕಾಮಗಾರಿ. | | |
| 4 | ವೆಟ್‌ವೆಲ್ ಮತ್ತು ಪಂಪು ಮನೆಗೆ ಕಾಂಪೌಂಡ್ ನಿರ್ಮಿಸುವ ಕಾಮಗಾರಿ. | | |

3....,

| | | |
|---|---|---|
| 5 | ಚಿನ್ನಾಪುರ ಗ್ರಾಮದ ಬಳಿ ಹಾಲಿ ಇರುವ ತ್ಯಾಜ್ಯ ನೀರು ಶುದ್ಧೀಕರಣ ಘಟಕದ ಬಳಿ ರಿಸೀವಿಂಗ್ ಚೇಂಬರ್ ನಿರ್ಮಾಣ ಕಾಮಗಾರಿ. | ಕೋಲಾರಮ್ಮ ಕೆರೆಗೆ ಕೆ.ಸಿ. ವ್ಯಾಲಿ ಯೋಜನೆಯಡಿ ನೀರು ತುಂಬಿಸುವ ಕಾಮಗಾರಿಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಕೈಗೊಂಡಿರುವ ಹಿನ್ನಲೆಯಲ್ಲಿ ಚಿನ್ನಾಪುರ ಕೆರೆಯಲ್ಲಿ ಹಾಲಿ ಇರುವ ಮತ್ತು ಅಮೃತ್ ಯೋಜನೆಯಡಿ ನಿರ್ಮಿಸಲು ಉದ್ದೇಶಿಸಿರುವ ತ್ಯಾಜ್ಯ ನೀರು ಶುದ್ಧೀಕರಣ ಘಟಕದಿಂದ ಕೋಲಾರಮ್ಮ ಕೆರೆಯನ್ನು ತುಂಬಿಸುವ ಪ್ರಸ್ತಾವನೆಯನ್ನು ಕೈಬಿಡುವಂತೆ ಕೋರಿದ್ದು ಇದರ ಬದಲಾಗಿ ಹಾಲಿ ಇರುವ 10.16 ದಶ ಲಕ್ಷ ಲೀಟರ್ ಸಾಮರ್ಥ್ಯದ ತ್ಯಾಜ್ಯ ನೀರು ಶುದ್ಧೀಕರಣ ಘಟಕ, 2 ವೆಟ್‌ವೆಲ್‌ಗಳು ಮತ್ತು ಹೊರ ಹರಿವು ಒಳ ಚರಂಡಿ ಕೊಳವೆ ಮಾರ್ಗ (out fall sewer line) ಗಳನ್ನು ಉನ್ನತೀಕರಿಸುವ ಕಾಮಗಾರಿಯನ್ನು ಕೈಗೊಳ್ಳುವಂತೆ ಕೋರಿರುತ್ತಾರೆ. |
| 6 | 500 ಮಿ.ಮಿ. ವ್ಯಾಸದ (DWC) ಸಂಪರ್ಕ ಕೊಳವೆ ಮಾರ್ಗ. | |
| 7 | ಏರಿಯೇಟರ್ ನಿರ್ಮಾಣ ಕಾಮಗಾರಿ. | |
| 8 | 8 ದಶಲಕ್ಷ ಲೀಟರ್ ಸಾಮರ್ಥ್ಯದ WSP ಮಾದರಿಯ ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಾಣ ಕಾಮಗಾರಿ. | ದಿನಾಂಕ:23.10.2020 ರಂದು ನಡೆದ 18ನೇ SLTC ಸಭೆಯಲ್ಲಿ WSP ತಂತ್ರಜ್ಞಾನದ ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಿಸಲು ಹೆಚ್ಚಿನ ವಿಸ್ತೀರ್ಣದ ಜಮೀನು ಅವಶ್ಯವಿರುವ ಕಾರಣ ಕಡಿಮೆ ವಿಸ್ತೀರ್ಣದ ಜಮೀನಿನಲ್ಲಿ ನಿರ್ಮಿಸಬಹುದಾದಂತಹ ತಂತ್ರಜ್ಞಾನವನ್ನು ಅಳವಡಿಸಿ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. ಅದರಂತೆ 8 ದಶಲಕ್ಷ ಲೀಟರ್ ಸಾಮರ್ಥ್ಯದ ಎಸ್.ಬಿ.ಆರ್. ತಂತ್ರಜ್ಞಾನದ ತ್ಯಾಜ್ಯ ನೀರು ಶುದ್ಧೀಕರಣ ಘಟಕ ಹಾಗೂ ಮಣಿಘಟ್ಟ ರಸ್ತೆಯಲ್ಲಿರುವ ವೆಟ್ ವೆಲ್ ನ ಪಂಪುಗಳನ್ನು ಉನ್ನತೀಕರಿಸಲು ಹಾಗೂ ಪೂರಕ ಕಾಮಗಾರಿಗಳನ್ನು ಅನುವು ಮಾಡಿರುವ ಪ್ರಸ್ತಾವನೆಗೆ ದಿನಾಂಕ:19.11.2020 ರಂದು ನಡೆದ SHPSC ಸಭೆಯಲ್ಲಿ ಅನುಮೋದನೆಯನ್ನು ನೀಡಲಾಗಿರುತ್ತದೆ.<br><br>ಪ್ರಸ್ತುತ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ (ಎನ್.ಜಿ.ಟಿ.) ಆದೇಶದನ್ವಯ ಚಿನ್ನಾಪುರ ಕೆರೆಯ ಅಂಗಳದಲ್ಲಿರುವ 10.16 ಎಂ.ಎಲ್.ಡಿ ಸಾಮರ್ಥ್ಯದ ಡಬ್ಲ್ಯೂ.ಎಸ್.ಪಿ. ಮಾದರಿಯ ತ್ಯಾಜ್ಯ ನೀರು ಶುದ್ಧೀಕರಣ ಘಟಕವನ್ನು ಉನ್ನತ್ತೀಕರಿಸಲು ಹಾಗೂ ಹೊಸ 08 ಎಂ.ಎಲ್.ಡಿ. ಸಾಮರ್ಥ್ಯದ ಎಸ್.ಬಿ.ಆರ್. ತಂತ್ರಜ್ಞಾನದ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳು ಬಫರ್ ವಲಯದಲ್ಲಿ ಬರುತ್ತಿರುವ ಕಾರಣ ಸದರಿ ಘಟಕಗಳನ್ನು ಸ್ಥಾಪಿಸುವುದಕ್ಕೆ ಅವಕಾಶವಿರುವುದಿಲ್ಲವೆಂದು ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಕೋಲಾರ ಜಿಲ್ಲೆ ರವರು ಆಕ್ಷೇಪಿಸಿರುತ್ತಾರೆ. ಕೋಲಾರ ನಗರಸಭೆ ವತಿಯಿಂದ ಕಾಮಗಾರಿಗೆ ಅವಶ್ಯವಿರುವ ಬದಲಿ ನಿವೇಶನವನ್ನು ಈವರೆಗೂ ಮಂಡಳಿಗೆ ಹಸ್ತಾಂತರಿಸದ ಕಾರಣ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. |
| 9 | ಸೆಪ್ಟಿಕ್ ಟ್ಯಾಂಕ್ ನಿರ್ಮಾಣ ಕಾಮಗಾರಿ - 2. | ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. |

| C | ವಿದ್ಯುತ್ ಕಾಮಗಾರಿಗಳು | | |
|---|---|---|---|
| 1 | 75 HP ಸಾಮರ್ಥ್ಯದ 02 ಸೀವೇಜ್ ಪಂಪುಗಳನ್ನು ಅಳವಡಿಸುವುದು. | ಮಣಿಘಟ್ಟ ರಸ್ತೆಯಲ್ಲಿರುವ ವೆಟ್ ವೆಲ್ಲಿನ ಪಂಪುಗಳ ಬದಲಾಗಿ – 75 HP ಸಾಮರ್ಥ್ಯದ 02 ಸೀವೇಜ್ ಪಂಪುಗಳನ್ನು ಅಳವಡಿಸಲಾಗಿದೆ. | ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. |
| 2 | 250 KVA ಸಾಮರ್ಥ್ಯದ DG Set ಒದಗಿಸಿ ಅಳವಡಿಸುವ ಕಾಮಗಾರಿ. | 250 KVA ಸಾಮರ್ಥ್ಯದ DG Set ಒದಗಿಸಿ ಅಳವಡಿಸುವ ಕಾಮಗಾರಿ | |

ಸದರಿ ಯೋಜನೆಯಡಿ ಕೋಲಾರ ನಗರಸಭೆ ವ್ಯಾಪ್ತಿಯಲ್ಲಿ ನೂತನವಾಗಿ ಅಭಿವೃದ್ಧಿಗೊಂಡಿದ್ದ ಬಡಾವಣೆಗಳಾದ ವಿನೋಬನಗರ, ಕೋಗಿಲಹಳ್ಳಿ, ಚೌಡೇಶ್ವರಿ ನಗರ, ನಿಸಾರ್‌ನಗರ, ಮಹಾಲಕ್ಷ್ಮಿ ಲೇಔಟ್, ಸುಲ್ತಾನ್ ತಿಪ್ಪಸಂದ್ರ, ಟಮಕ ಹಾಗೂ ಇತರೆ ಪ್ರದೇಶಗಳಲ್ಲಿ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ. ಮೊದಲನೇ ಹಾಗೂ ಎರಡನೇ ಹಂತದ ಒಳಚರಂಡಿ ಯೋಜನೆಯಡಿಯಲ್ಲಿ ನಗರದ ಕಠಾರಿಪಾಳ್ಯ, ದೊಡ್ಡಪೇಟೆ, ಕುರುಬರಪೇಟೆ, ಕೋಟೆ, ಕುಂಬಾರಪೇಟೆ, ಕೆ.ಜಿ.ಮೊಹಲ್ಲಾ, ಶಾಂತಿನಗರ, ಆಜಾದ್ ನಗರ ಇತ್ಯಾದಿ ಪ್ರದೇಶಗಳಲ್ಲಿ ಹಾಲಿ ಒಳಚರಂಡಿ ಮಾರ್ಗಗಳನ್ನು ದಿನಾಂಕ:08.12.2020 ರಂದು ಪುನರುಜ್ಜೀವನಗೊಳಿಸಿದ್ದು, ಉಳಿಕೆ ಕಾಮಗಾರಿಗಳನ್ನು ದಿನಾಂಕ:24.05.2022 ರಂದು ಪೂರ್ಣಗೊಳಿಸಲಾಗಿರುತ್ತದೆ.

ಯೋಜನೆಯ ಅನುಷ್ಠಾನದ ಅವಧಿಯಲ್ಲಿ ವಿನ್ಯಾಸ ಮತ್ತು ಪರಿವೀಕ್ಷಣೆಗಾಗಿ PDMC ಯನ್ನು ನೇಮಿಸಿದ್ದು ಕಾಮಗಾರಿಗೆ ಬಳಕೆಯಾದ ವಸ್ತುಗಳು ಮತ್ತು ಕಾಮಗಾರಿಯು PDMC ರವರಿಂದ ತಪಾಸಣೆಗೆ ಒಳಪಟ್ಟಿದ್ದು ಕಾಮಗಾರಿಯು ಯಾವ ಹಂತದಲ್ಲಿಯೂ ಸಹ ಕಳಪೆಯಾಗಿರುವುದಿಲ್ಲ. ಇದಲ್ಲದೆ ಕೇಂದ್ರ ಸರ್ಕಾರದಿಂದ ನಿಯೋಜಿಸಲ್ಪಟ್ಟ IRMA ಸಂಸ್ಥೆಯು ಸಹ ಯೋಜನೆಯ ಕಾಮಗಾರಿಗಳನ್ನು ವಿವಿಧ ಹಂತಗಳಲ್ಲಿ ಪರಿವೀಕ್ಷಣೆ ನಡೆಸಿದ್ದು ಆ ಸಮಯದಲ್ಲಿ ಗಮನಿಸಿದ ನ್ಯೂನತೆಗಳನ್ನು ಮಂಡಳಿ ವತಿಯಿಂದ ನಿಯಮಾವಳಿಗಳಂತೆ ಸರಿಪಡಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲಾಗಿರುತ್ತದೆ.

ಯಂತ್ರಗುಂಡಿಗಳು ನಿರ್ಮಾಣವಾಗಿ ತಿಂಗಳು ಕಳೆಯುವ ಹೊತ್ತಿಗೆ ಕಳಪೆ ಕಾಮಗಾರಿಯಿಂದ ಹಾನಿಯಾಗಿರುವ ಕುರಿತು ಯಾವುದೇ ಪ್ರಕರಣ ವರದಿಯಾಗಿರುವುದಿಲ್ಲ. ಕೋಲಾರ ನಗರದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಮುಖ್ಯ ರಸ್ತೆಗಳ ಅಭಿವೃದ್ಧಿ ಕೈಗೊಂಡ ಸ್ಥಳಗಳಲ್ಲಿ ಒಳಚರಂಡಿ ಚೆಂಬರ್‌ಗಳನ್ನು ಅಲ್ಲಿನ ಗುತ್ತಿಗೆದಾರರು ಹಾನಿ ಮಾಡಿರುತ್ತಾರೆ. ಅಲ್ಲದೇ ಚೆಂಬರ್ ಗಳನ್ನು ರಸ್ತೆಯ ಎತ್ತರಕ್ಕೆ ಮರು ನಿರ್ಮಾಣ ಮಾಡುವಾಗ ಒಂದೇ ಎತ್ತರಕ್ಕೆ ನಿರ್ಮಿಸದಿರುವುದು ಕಂಡುಬಂದಿರುತ್ತದೆ. ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವಂತೆ ಮಂಡಳಿಯಿಂದ ದಿನಾಂಕ:21.12.2021 ರಂದು ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿರುತ್ತದೆ.

ಸದರಿ ಯೋಜನೆಯಡಿ ಅಳವಡಿಸಲಾಗಿದ್ದ ಒಳಚರಂಡಿ ಕೊಳವೆ ಮಾರ್ಗವನ್ನು Flow test ಮಾಡಿದ ನಂತರ ದಿನಾಂಕ:31.12.2020 ರಿಂದ ದಿನಾಂಕ:22.02.2022 ರವರೆಗೂ ಗುತ್ತಿಗೆದಾರರು ನಿರ್ವಹಿಸಿರುತ್ತಾರೆ. ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ 1 ವರ್ಷದ DLP ಅವಧಿಯು ದಿನಾಂಕ:23.05.2023 ರಂದು ಪೂರ್ಣಗೊಂಡಿರುತ್ತದೆ.

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ದಿನಾಂಕ:13.11.2020ರ ಪತ್ರದಲ್ಲಿ ಅಮೃತ್ ಮಾರ್ಗ ಸೂಚಿಯಂತೆ ಯೋಜನೆಯ ಕಾಮಗಾರಿಗಳು ಪೂರ್ಣಗೊಂಡ ನಂತರ ಕಾಮಗಾರಿಗಳನ್ನು 5 ವರ್ಷಗಳ ಕಾಲ ನಿರ್ವಹಣೆ ಮಾಡಲು ಮಂಡಳಿ ಹಾಗೂ ಸ್ಥಳೀಯ ಸಂಸ್ಥೆ ನಡುವೆ ಒಡಂಬಡಿಕೆ (MoU) ಮಾಡಿಕೊಳ್ಳುವಂತೆ ಮಂಡಳಿಗೆ ಸೂಚಿಸಿರುತ್ತಾರೆ. ಆದರಂತೆ ಒಡಂಬಡಿಕೆ ಮಾಡಿಕೊಳ್ಳುವ ಕುರಿತು ಪೌರಾಯುಕ್ತರು, ನಗರಸಭೆ ಕೋಲಾರ ರವರಿಗೆ ಮಂಡಳಿಯಿಂದ ದಿನಾಂಕ:23.12.2021 ರಂದು ಪತ್ರ ಬರೆದು ಕೋರಲಾಗಿದ್ದರೂ ಸಹ ಈವರೆವಿಗೂ ಯಾವುದೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿರುವುದಿಲ್ಲ.

ದಿನಾಂಕ:16.02.2022 ರಂದು ನಡೆದ ಕೋಲಾರ ನಗರಸಭೆಯ ಸಾಮಾನ್ಯ ಸಭೆಯಲ್ಲಿ ಅಮೃತ್ ಯೋಜನೆಯಡಿ ಕೈಗೊಳ್ಳುವ ಒಳಚರಂಡಿ ಕಾಮಗಾರಿಯ ನಿರ್ವಹಣೆಯ ಬಗ್ಗೆ ಚರ್ಚಿಸಿ ಸದರಿ ಯೋಜನೆಯಡಿ ಕೈಗೊಳ್ಳುವ ಒಳಚರಂಡಿ ಕಾಮಗಾರಿಗಳ ನಿರ್ವಹಣೆಯ ವೆಚ್ಚವನ್ನು ನಗರಸಭೆ ವತಿಯಿಂದ ಭರಿಸಲು ಸಾಧ್ಯವಿಲ್ಲವೆಂದು ನಿರ್ಣಯಿಸಿ ಅಮೃತ್ ಯೋಜನೆಯಡಿ ಸರಬರಾಜು ಮಾಡಲಾಗಿದ್ದ 6000 ಲೀಟರ್ ಸಾಮರ್ಥ್ಯದ 01 ಜಟ್ಟಿಂಗ್ ಹಾಗೂ ಸಕ್ಕಿಂಗ್ ಯಂತ್ರವನ್ನು ನಗರಸಭೆಗೆ ಹಸ್ತಾಂತರಿಸಿಕೊಳ್ಳಲು ನಿರ್ಣಯಿಸಲಾಗಿರುತ್ತದೆ. ಅದರಂತೆ ದಿನಾಂಕ:22.02.2022 ರಂದು ಜಟ್ಟಿಂಗ್ ಹಾಗೂ ಸಕ್ಕಿಂಗ್ ಯಂತ್ರವನ್ನು ಮಂಡಳಿಯಿಂದ ನಗರಸಭೆಗೆ ಹಸ್ತಾಂತರಿಸಲಾಗಿರುತ್ತದೆ. ತದನಂತರ ಅಮೃತ್ ಯೋಜನೆಯ ಒಳಚರಂಡಿ ಕಾಮಗಾರಿಗಳ ನಿರ್ವಹಣೆಯನ್ನು ನಗರಸಭೆಯ ವತಿಯಿಂದ ಕೈಗೊಳ್ಳಲಾಗಿರುತ್ತದೆ. ಜನವರಿ-2021 ರಿಂದ ಫೆಬ್ರುವರಿ-2022 ರವರಗೆ ಗುತ್ತಿಗೆದಾರರು ಕೈಗೊಂಡಿರುವ ಒಳಚರಂಡಿ ಕಾಮಗಾರಿಯ ನಿರ್ವಹಣೆಯ ಬಾಬ್ತು ರೂ.55.72 ಲಕ್ಷಗಳಾಗಿದ್ದು, ಸದರಿ ಮೊತ್ತವನ್ನು ನಗರಸಭೆಯು ಮಂಡಳಿಗೆ ಠೇವಣಿ ಮಾಡಿರುವುದಿಲ್ಲ.

ದಿನಾಂಕ:14.09.2022 ರಂದು ಜಿಲ್ಲಾಧಿಕಾರಿ, ಕೋಲಾರ ಜಿಲ್ಲೆ, ಕೋಲಾರ ರವರ ಅಧ್ಯಕ್ಷತೆಯಲ್ಲಿ ನಡೆದ ಅಮೃತ್ – 1.0 ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅಮೃತ್ ಯೋಜನೆಯಡಿ ಕೈಗೊಂಡಿರುವ ಒಳಚರಂಡಿ ಕಾಮಗಾರಿಯ ನಿರ್ವಹಣೆಯ ವೆಚ್ಚವನ್ನು ನಗರಸಭೆ ವತಿಯಿಂದ ಪಾವತಿಸಲು ಕ್ರಮವಹಿಸದ ಕಾರಣ ಸದರಿ ಯೋಜನೆಯಡಿ ಖರೀದಿಸಲಾದ ಜಟ್ಟಿಂಗ್ ಮತ್ತು ಸಕ್ಕಿಂಗ್ ಯಂತ್ರದೊಂದಿಗೆ ಗುತ್ತಿಗೆದಾರರು ನಿರ್ವಹಣೆಯನ್ನು ಮಾಡಲು ಕಷ್ಟಕರವಾಗಿರುವುದರಿಂದ ಸದರಿ ಕಾಮಗಾರಿಯ ಸಂಪೂರ್ಣ ನಿರ್ವಹಣೆಯನ್ನು ನಗರಸಭೆಗೆ ವಹಿಸಿಕೊಳ್ಳಲು ಹಾಗೂ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ನಗರಸಭೆಗೆ ಹಸ್ತಾಂತರಿಸಿಕೊಳ್ಳಲು ಜಿಲ್ಲಾಧಿಕಾರಿಗಳು ನಗರಸಭೆಯ ಆಯಕ್ತರಿಗೆ ಸೂಚಿಸಿದ್ದು ಅದರಂತೆ ಮಂಡಳಿ ವತಿಯಿಂದ ಕೈಗೊಂಡಿರುವ ಎಲ್ಲಾ ಕಾಮಗಾರಿಗಳನ್ನು ಮುಂದಿನ ನಿರ್ವಹಣೆಗಾಗಿ ಕೋಲಾರ ನಗರಸಭೆಗೆ ಹಸ್ತಾಂತರಿಸಲಾಗಿರುತ್ತದೆ.

16/02/2024

**(ಬಿ.ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ಸಂಖ್ಯೆ: ನಅಇ 08 ಯುಎಂಎಸ್ 2024